

ನಿಮಿಷಗಳ ಅಂತರದಲ್ಲಿದ್ದರೂ ಹೋಟೆಲ್‌ನ ಒಂದು ಕಡೆ ಕಾಡು. 14 ಅಂತಸ್ತುಗಳಷ್ಟು ಎತ್ತರದ ಸುಣ್ಣದ ಕಲ್ಲಿನ ಬೆಟ್ಟ 'ರಾಕ್ ಹ್ಯಾವೆನ್'. ಮನೋಹರವಾದ ಪುರಾತನ ಬೆಟ್ಟಗಳು ಅನೇಕ ಸುಂದರ ಗಿಡಗಳು ಮತ್ತು ಪ್ರಾಣಿಗಳಿಗೆ ಆಶ್ರಯ ನೀಡಿವೆ.  ಇಂತಹ ಅಪರೂಪದ ಬೆಟ್ಟಗಳು ಆಗ್ನೇಯ ಏಷ್ಯಾದ ಕೆಲವೇ ಕಡೆ ಕಾಣಸಿಗುತ್ತವೆ. ಕಾಡನ್ನು ಹಾಗೇ ಉಳಿಸಿಕೊಂಡರೂ ಬೇಲಿಯ ಈಚೆ ಕಾಡುಪ್ರಾಣಿ, ಹಾವು, ಹುಳು ಹುಪ್ಪಟೆ ಇರಲಿ ಸೊಳ್ಳೆ ಕೂಡ ಬರದಂತೆ ನೈಸರ್ಗಿಕ ವ್ಯವಸ್ಥೆ ಇದೆ ಎಂದು ವಿವರಿಸಿದರು ಹೋಟೆಲ್‌ನ ಅಸಿಸ್ಟಂಟ್ ಮಾರ್ಕೆಟಿಂಗ್ ಮ್ಯಾನೇಜರ್ ಚಾಂಗ್ ಯಿ ಲಿಯಾಂಗ್. ನೈಸರ್ಗಿಕವಾದ ನಾಲ್ಕು ಎಕರೆಯಷ್ಟು ಹರಿವ ತೊರೆ, ಅದರಲ್ಲಿ ಅರಳಿದ ಕಮಲ, ಪಕ್ಕದಲ್ಲೇ 60 ಮೀಟರ್ ಅಳತೆಯ ಸಮುದ್ರ ಕುದುರೆಯ ಆಕಾರದಲ್ಲಿರುವ ಆಕರ್ಷಕ ಈಜುಗೊಳ.

ಸಂಜೆಗತ್ತಲಿನಲ್ಲಿ 13ನೇ ಅಂತಸ್ತಿನ ಕೋಣೆಯ ಬಾಲ್ಕನಿಯಿಂದ ಈ ದೃಶ್ಯ ಇನ್ನೂ ಚೆನ್ನಾಗಿ ಕಾಣತೊಡಗಿತ್ತು. ನೀರವ ಮೌನ, ಪ್ರಶಾಂತ ಪರಿಸರದಲ್ಲಿ ಮತ್ತೆ ಕೆಲ್ಲಿ ನೆನಪಾಗಿದ್ದ. 'ರಾತ್ರಿ ಕೂಡ ದೆವ್ವ, ಆತ್ಮಗಳ ಬಗ್ಗೆ ಸಂಶೋಧನೆ ಮಾಡುವವರು ಅಧ್ಯಯನಕ್ಕೆಂದು ಕೆಲ್ಲಿಯ ಕೋಟೆಗೆ ಬರುವುದುಂಟು' ಎಂದು ಗೈಡ್ ಜೀವನ್ ಹೇಳಿದ ಮಾತು ನೆನಪಾಗಿತ್ತು. 17 ವರ್ಷ ಮೇಲ್ಪಟ್ಟ ಆರೋಗ್ಯವಂತರು ರಾತ್ರಿ ಕೋಟೆ ವೀಕ್ಷಿಸಲು ಅವಕಾಶವಿದೆ. ಹೀಗೆ ಒಂದು ಸಲ ಬಾವಲಿಗಳ ಫೋಟೊ ತೆಗೆಯಲೆಂದು ಹೋದ ಅಮೆರಿಕದ ದಂಪತಿಗೆ ಕೆಲ್ಲಿಯ ಆತ್ಮ ಕಂಡಿತ್ತಂತೆ.

ಹೆದ್ದಾರಿ ಪಕ್ಕ ಹಸಿರು ಪರ್ವತಗಳು, ಅವುಗಳಿಗಿಂತಲೂ ಕಡಿಮೆ ಎತ್ತರದಲ್ಲಿ ತೇಲುತ್ತಿದ್ದ ಮೋಡಗಳು! ಮೇ ತಿಂಗಳ ಕೊನೆಗೆ ಬಹಳ ಆಹ್ಲಾದಕರ ವಾತಾವರಣದಲ್ಲಿ ಲಾಂಗ್‌ಡ್ರೈವ್ ಅನನ್ಯ ಅನುಭವ. ಅಲ್ಲಿ ಲೆಂಗಾಂಗ್ ಕಣಿವೆಯ ಗ್ಯಾಲರಿ ಆರ್ಕಿಯಾಲಜಿ ಮ್ಯೂಸಿಯಂ ಮತ್ತೊಂದು ಆಕರ್ಷಣೆ.

ಮ್ಯೂಸಿಯಂನ ಪ್ರವೇಶದ್ವಾರ ಕೃತಕವಾಗಿ ನಿರ್ಮಿಸಿದ ಗುಹೆಯ ಮಾದರಿಯನ್ನು ಪ್ರವೇಶಿಸಿದರೆ ಎರಡಂತಸ್ತಿನ ಮ್ಯೂಸಿಯಂ. ಯುನೆಸ್ಕೋದ ಪಾರಂಪರಿಕ ತಾಣವಾಗಿ ಇದನ್ನು 2012ರಲ್ಲಿ ಗುರುತಿಸಿದ್ದಾರೆ. ಈ ಹೆಗ್ಗಳಿಕೆ ತಂದು ಕೊಟ್ಟವನು ಪೆರಾಕ್‌ನ ಮನುಷ್ಯ. ಇದು ಅತ್ಯಂತ ಸ್ಮರಣೀಯ ಮತ್ತು ಆಸಕ್ತಿದಾಯಕ ಸ್ಥಳವಾಗಿ ನೆನಪಿನಲ್ಲಿ ಉಳಿಯುವಂಥ ಮ್ಯೂಸಿಯಂ.

ಯುನೆಸ್ಕೊ ವಿಶ್ವ ಪಾರಂಪರಿಕ ತಾಣವಾಗಿ ಗುರುತಿಸಿಕೊಳ್ಳುವವರೆಗಿನ ಪ್ರಮುಖ ಹಂತಗಳನ್ನು ಉಲ್ಲೇಖಿಸಿದ ಫಲಕಗಳಿವೆ. ಉತ್ಖನನ ಮತ್ತು ನಂತರದ ಅಧ್ಯಯನದ ಎಲ್ಲ ವಿವರಗಳು ಹಂತ ಹಂತವಾಗಿ ಎಲ್‌ಇಡಿ ಟಿ.ವಿ. ಪರದೆಯಲ್ಲಿ ಬಿತ್ತರವಾಗುತ್ತಲೇ ಇರುತ್ತವೆ. ಮ್ಯೂಸಿಯಂನಿಂದ ಹೊರ ಬಂದಾಗ ವಿಕಾಸದ ಹಾದಿಯಲ್ಲೊಂದು ಸುತ್ತು ಹಾಕಿ ಬಂದ ಅನುಭವ.

## ವಿಕಾಸದ ಹಾದಿ

ಒಂದೇ ಸ್ಥಳದಲ್ಲಿ ಸುದೀರ್ಘ ಸಾಂಸ್ಕೃತಿಕ ಸರಣಿ ಪರಂಪರೆ ಕಂಡುಬರುವ ಕೆಲವೇ ವಿಶ್ವದ ತಾಣಗಳಲ್ಲಿ ಲೆಂಗಾಂಗ್ ಕಣಿವೆಯ ಪುರಾತತ್ವ ಪರಂಪರೆಯೂ ಒಂದು. ಇಲ್ಲಿನ ಮಾನವ ಇತಿಹಾಸ ಅಂದಾಜು ಎರಡು ದಶಲಕ್ಷ ವರ್ಷಗಳ ಹಿಂದಕ್ಕೆ ದಾಖಲಾಗಿದೆ.

ಇಂಡೋನೇಷ್ಯಾದ ಸುಮಾತ್ರಾದಲ್ಲಿ 74 ಸಾವಿರ ವರ್ಷಗಳ ಹಿಂದೆ ತೋಬಾ ಪರ್ವತದ ಜ್ವಾಲಾಮುಖಿಯಾದಾಗ ಕಂಡುಬಂದಂತಹುದೇ ಬೂದಿ ಲೆಂಗಾಂಗ್ ಕಣಿವೆಯಲ್ಲೂ ಕಾಣಿಸಿಕೊಂಡಿದೆ ಎಂಬುದನ್ನು ಪುರಾತತ್ವ ಸಂಶೋಧನೆ ತಿಳಿಸಿದೆ. ತೋಬಾ ಬೂದಿಯ ವೈಜ್ಞಾನಿಕ ಅಧ್ಯಯನ, ಈ ಬೂದಿ ಬರೀ ಮಲೇಷ್ಯಾದಲ್ಲಿ ಮಾತ್ರವಲ್ಲ, ಭಾರತದಲ್ಲೂ ಕಂಡುಬಂದಿತ್ತು ಎಂಬುದನ್ನೂ ತಿಳಿಸಿದೆ.

ಮ್ಯೂಸಿಯಂನ ಮುಖ್ಯ ಆಕರ್ಷಣೆ ಪೆರಾಕ್ ಮನುಷ್ಯ. ಅವನ ಅಸ್ಥಿಪಂಜರವನ್ನು ಗಾಜಿನ ಪೆಟ್ಟಿಗೆಯಲ್ಲಿ ನೇರ ಮಲಗಿದ ಭಂಗಿಯಲ್ಲಿ ನೋಡಲು ಇರಿಸಿದ್ದಾರೆ. ಹತ್ತು ಸಾವಿರ ವರ್ಷಗಳಷ್ಟು ಹಿಂದಿನ ಚರಿತ್ರೆಪೂರ್ವ ಕಾಲದ, ಆಗ್ನೇಯ ಏಷ್ಯಾದಲ್ಲೇ ಅತ್ಯಂತ ಪುರಾತನವಾದ ಇಡಿಯಾದ ಅಸ್ಥಿಪಂಜರ ಗುವಾ ಗುನುಂಗ್ ರುನ್‌ತುಹ್‌ನಲ್ಲಿ ನಡೆದ ಉತ್ಖನನದಲ್ಲಿ ದೊರೆತಿದೆ. ಗರ್ಭಸ್ಥ ಶಿಶುವಿನ ಭಂಗಿಯಲ್ಲಿ ಇವನನ್ನು ವಿಧ್ಯುಕ್ತವಾಗಿ ಹೂತಿದ್ದರು. ಶಿಲಾಯುಧ, ಚಿಪ್ಪು, ವಿವಿಧ ಪ್ರಾಣಿಗಳ ಮಾಂಸ.. ಹೀಗೆ ಅವನ ಜತೆ ಹೂಳಲಾದ ವಸ್ತುಗಳೆಲ್ಲ ಶಿಲಾಯುಗದ ಜನಜೀವನ, ಕಾಯಿಲೆ, ನಂಬುಗೆ, ಶವಸಂಸ್ಕಾರ ಪದ್ಧತಿಗಳ ಮೇಲೆ ಬೆಳಕು ಚೆಲ್ಲಿವೆ.

ಟೈಪ್ ಎ2 ಬ್ರಾಕಿಮೆಸೊಫಲಂಜಿಯ ವೈಕಲ್ಯದೊಂದಿಗೇ ಈತ ಹುಟ್ಟಿದ್ದ. ಚರಿತ್ರೆಪೂರ್ವ ಕಾಲದಲ್ಲಿ ದೊರೆತ ಯಾವ  ಅಸ್ಥಿಪಂಜರದಲ್ಲೂ ಜಗತ್ತಿನಲ್ಲಿ ಎಲ್ಲಿಯೂ ಈ ಕಾಯಿಲೆ ಕಂಡುಬಂದಿಲ್ಲ. ಆತ ಹೇಗೆ ನಡೆಯುತ್ತಿದ್ದಿರಬಹುದು ಎಂದು ಊಹಿಸಿ ಅನಿಮೇಟೆಡ್ ಪೆರಾಕ್ ಮನುಷ್ಯನ ವಿಡಿಯೊ ಕೂಡ ಮಾಡಿದ್ದಾರೆ.

ಶಿಲಾಯುಗ (ಪೇಲಿಯೊಲಿಥಿಕ್)ದ ಈ ಮನುಷ್ಯನ ವಯಸ್ಸು, ಅವನು ಸೇವಿಸುತ್ತಿದ್ದ ಆಹಾರ ಎಂಥದು ಎಂದು ಹಲ್ಲುಗಳನ್ನು ಪರೀಕ್ಷಿಸಿ ಅರಿತಿದ್ದಾರೆ. ಅವನದು ಸಹಜ ಸಾವು, ಅಂಗವೈಕಲ್ಯ ಹುಟ್ಟಿನಿಂದಲೆ ಇತ್ತು ಎಂಬುದೂ ಪತ್ತೆಯಾಗಿದೆ. ಅವನು ಪೆರಾಕ್‌ನಲ್ಲೇ ದೊರೆತ ಕಾರಣ, ಅವನಿಗೆ ಪೆರಾಕ್ ಮನುಷ್ಯ ಎಂಬ ಹೆಸರನ್ನೂ ಕೊಟ್ಟಿದ್ದಾರೆ. ಇನ್ನೂ ತಮಾಷೆ ಎನಿಸಿದ್ದು ಅವನಿಗೆ ಇಲ್ಲಿನದೊಂದು  ನಾಗರಿಕತ್ವದ ಗುರುತಿನ ಚೀಟಿ ನೀಡಿರುವುದು! ಅವನ ಐಡೆಂಟಿಟಿ ಕಾರ್ಡ್‌ನ ದೊಡ್ಡ ಪ್ರತಿ ಮಾಡಿ ಮ್ಯೂಸಿಯಂನ ಗೋಡೆಗೆ ನೇತುಹಾಕಲಾಗಿದೆ. ಮ್ಯೂಸಿಯಂನ ಪಕ್ಕದಲ್ಲಿ ಉತ್ಖನನ ಸ್ಥಳವನ್ನು ಹಾಗೇ ಉಳಿಸಿಕೊಂಡಿದ್ದಾರೆ.